ಶ್ರೀ ಹೆಚ್.ಜಿ.ಗೋವಿಂದಗೌಡ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು

ಅ) 292 174

ಆ) ರಾಜ್ಯ ಪುನರ್ವಿಂಗಡಣೆ ಪೂರ್ವದಲ್ಲಿ ಹೈದರಾಬಾದ್ ಪ್ರದೇಶದ ಹಾಗೂ ಇತರ ಪ್ರದೇಶಗಳ ಪ್ರಾಥಮಿಕ ಶಾಲಾ ಶಿಕ್ಷಕರ ವೇತನಗಳು ಬೇರೆ ಬೇರೆಯಾಗಿದ್ದವು.

ಇ) 1961ರ ವೇತನ ಪರಿಷ್ಕರಣೆಯಲ್ಲಿ ಇವರೆಲ್ಲರಿಗೂ ಒಂದೇ ವೇತನ ನೀಡಲಾಗಿ ವೇತನ ತಾರತಮ್ಯ ಉಂಟಾಯಿತು. ಇದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ರಾಜ್ಯ ಸರ್ಕಾರ ಹಾಗೂ ಅರ್ಜಿದಾರರ ರಾಜೀ ಸೂತ್ರದನ್ವಯ ಹೈದರಾಬಾದ್ ಪ್ರದೇಶದ ಶಿಕ್ಷಕರ ವೇತನನ ಸೌಲಭ್ಯವನ್ನು ಇತರ ಪ್ರದೇಶಗಳಲ್ಲಿನ ದಿನಾಂಕ 31-12-89ರ ಹಿಂದೆ ನೇಮಕವಾಗಿದ್ದ ಎಲ್ಲಾ ಅರ್ಹ ಶಿಕ್ಷಕರಿಗೂ ಮಂಜೂರು ಮಾಡಲಾಯಿತು.

ಈ) ಆದರೆ, ರಾಜ್ಯ ಪುನರ್ವಿಂಗಡಣೆ ಪೂರ್ವದಲ್ಲಿ ಈ ವಿವಿಧ ಪ್ರದೇಶಗಳಲ್ಲಿನ ನಾನ್ ಎಸ್.ಎಸ್.ಎಲ್.ಸಿ ತರಬೇಕಾಗದ ಶಿಕ್ಷಕರು: ವೃತ್ತಿ ಶಿಕ್ಷಕರ ವೇತನದಲ್ಲಿ ವ್ಯತ್ಯಾಸ ಇರಲಿಲ್ಲ. ಹಾಗಾಗಿ ಇಂತಹ ಶಿಕ್ಷಕರನ್ನು ಹೈದರಾಬಾದ್ ವೇತನ ಸೌಲಭ್ಯ ವಿಸ್ತರಣಾ ಆದೇಶದ ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ನಾನ್ ಎಸ್.ಎಸ್.ಎಲ್.ಸಿ ತರಬೇಕಾಗದ ವೃತ್ತಿ ಶಿಕ್ಷಕರು ಸದರಿ ವೇತನ ಸೌಲಭ್ಯಕ್ಕೆ ಅರ್ಹರಲ್ಲದಿರುವುದರಿಂದ ಅವರಿಗೆ ಈಗ ಹೈದರಾಬಾದ್ ವೇತನ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸುರತ್ಕಲ್ ಕ್ಷೇತ್ರದ ಮೂಡುಶೆಟ್ಟಿ ಕ್ಷಯರೋಗ ಆಸ್ಪತ್ರೆಯ ಕಟ್ಟಡದ ಸ್ವಾಧೀನ ಪಡೆಯುವುದು.

351(714) **ಶ್ರೀ ಕುಂಭ್ಳೆ ಸುಂದರರಾವ್(ಸುರತ್ಕಲ್)** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಮೂಡುಶೆಟ್ಟಿಯ ಕ್ಷಯರೋಗ ಆಸ್ಪತ್ರೆತೆಯ ಕಟ್ಟಡ ವಿಸ್ತರಣೆ ಕಾರ್ಯವನ್ನು ಎಂದು ಪೂರ್ತಿ ಮಾಡಲಾಯಿತು: ಇದಕ್ಕೆ ತಗಲಿದ ವೆಚ್ಚ ಎಷ್ಟು?

ಆ) ಈ ಆಸ್ಪತ್ರೆಯ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದಿರಲು ಕಾರಣವೇನು? ಯಾವಾಗ ಅದರ ಪ್ರಯೋಜನ ಜನರಿಗೆ ದೊರಕುವುದು?

ಡಾ: ಹೆಚ್.ಸಿ. ಮಹದೇವಪ್ಪ ಆರೋಗ್ಯ ಸಚಿವರು.

ಅ) 1994-95ನೇ ಸಾಲಿನಲ್ಲಿ ಕಟ್ಟಡ ಕಾಮಗಾರಿ ಪೂರ್ಣವಾಗಿದೆ. ಡಿಸೆಂಬರ್ 95ರವರೆಗೆ ರೂ.29.15 ಲಕ್ಷಗಳು ವೆಚ್ಚವಾಗಿರುತ್ತದೆ.

ಆ) ಕಟ್ಟಡ ಕಾಮಗಾರಿ ಪೂರ್ಣವಾಗಿದ್ದೂ ಇನ್ನೂ ಕೆಲವು ಅಗತ್ಯ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರು ಕೈಗೊಳ್ಳಬೇಕಿದ್ದು, ಅದರಿಂದಾಗಿ ಕಟ್ಟಡವನ್ನು ಸ್ವಾಧೀನಕ್ಕೆ

ತೆಗೆದುಕೊಂಡಿರುವುದಿಲ್ಲ. ಸದರಿ ಅಗತ್ಯ ಕಾಮಗಾರಿ ಮುಗಿಸಿದ ಕೂಡಲೇ ಕಟ್ಟಡದ ಉಪಯೋಗ ಜನರಿಗೆ ದೊರಕಲು ಕಟ್ಟಡದ ಸ್ವಾಧೀನ ಪಡೆದು ಆಸ್ಪತ್ರೆ ಪ್ರಾರಂಭಿಸಲು ಸಂಬಂದಿಸಿದವರಿಗೆ ಸೂಚಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ

352(712) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವವು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸರಕಾರಿ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ? ಎಷ್ಟು ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ;

ಆ) ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೆ?

ಇ) ದಕ್ಷಿಣ ಕನ್ನಡ ಜಿಲ್ಲೆ ಉಪನಿರ್ದೇಶಕರ ಕಛೇರಿಗೆ ಸ್ವಂತ ಕಟ್ಟಡ ಒದಗಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಹೆ.ಚ್.ಜಿ.ಗೋವಿಂದೆಗೌಡ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು.

ಅ) ಸ್ವಂತ ಕಟ್ಟಡವಿರುವ ಶಾಲೆಗಳ ಸಂಖ್ಯೆ - 177 ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಶಾಲೆಗಳ - 12 ಸಂಖ್ಯೆ

ಆ) ಇದೆ.

ಇ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಸರ್ಕಾರಿ ಪಾಲಿಟೆಕ್ನಿಕ್ ಆರೆಕಾಲಿಕ ಉಪನ್ಯಾಸಕರ ಕುರಿತು

353(615) ಶ್ರೀ ಕರಡಿ ಸಂಗಣ್ಣ (ಕೊಪ್ಪಳ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರವರೆ

ಅ) ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಆರೆಕಾಲಿಕ ಉಪನ್ಯಾಸಕರಾಗಿ ಎಷ್ಟು ಜನ ಸೇವೆ ಸಲ್ಲಿಸುತ್ತಿದ್ದಾರೆ (ಜಿಲ್ಲಾವಾರು ವಿವರ ನೀಡುವುದು)

ಆ) ಸರ್ಕಾರದ ಪದವಿ ಕಾಲೇಜ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಆರೆಕಾಲಿಕ ಉಪನ್ಯಾಸಕರಿಗೆ ವೇತನ ನಿಗದಿ ಪಡಿಸಿದಂತೆ ಈ ಆರೆಕಾಲಿಕ ಉಪನ್ಯಾಸಕರಿಗೆ ವೇತನ ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;